ಶ್ರೀ ವಾಟಾಳ್ ನಾಗರಾಜ್ :— ತಾವು ಹೇಳಿದ್ದು ನನಗೆ ಅರ್ಥವಾಗಲಿಲ್ಲ.

ಅಧ್ಯಕ್ಷರು :— ಇನ್ನು ಮುಂದಕ್ಕೆ ಶ್ರೀ ವಾಟಾಳ್‌ರ ಸಲಹೆ ಪಡೆದುಕೊಳ್ಳಿ. ಸರ್ಕಾರಕ್ಕೆ ಕೆಲವು ಸನ್ನಿವೇಶಗಳಲ್ಲಿ ಅವರು ಸಹಾಯ ಮಾಡುತ್ತಾರೆ. ಇವರು ಸಹಾಯ ಮಾಡುವಾಗ ಗಟ್ಟಿಯಾಗಿ ಹೇಳಬೇಕು, ಇದು ನನ್ನ ಕ್ಷೇತ್ರದ ಕೆಲಸ, ಹಾಗೂ ನನ್ನ ಗೌರವದ ಪ್ರಶ್ನೆ ಕೂಡ ಹೌದು ಎಂದು ಹೇಳಬೇಕು. ಮಾನ್ಯ ವಾಟಾಳ್‌ರವರೆ, ಅವರು ಈ ಸದನದಲ್ಲಿ ಹೊಸಬರಾಗಿರುವುದರಿಂದ ಅವರಿಗೆ ಗೊತ್ತಾಗಲಿಲ್ಲ, ಅವರ ಹಿಂದೆ ಹೋಗಿ ಓಟ್ ಹಾಕಿಬಿಟ್ಟರು. ನೀವು ಅವರಿಗೆ ಗೈಡೆನ್ಸ್ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ :— ನಾವೆಲ್ಲಾ ನಿಮ್ಮನ್ನು ಅಧ್ಯಕ್ಷರನ್ನಾಗಿ ಮಾಡಿಕೊಂಡಿದ್ದೇವೆ.

ಶ್ರೀ ಎಂ.ಸಿ. ನಾಣಯ್ಯ :— ?

ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) :— ಮಾನ್ಯ ಅಧ್ಯಕ್ಷರೆ, ನಾನು ಈ ಪುರಸಭೆ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇನೆ, ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಸದನದಲ್ಲಿ ಇಲ್ಲ, ಇದನ್ನು ಇಲ್ಲಿ, ಈಗ ಪ್ರಸ್ತಾಪ ಮಾಡಬೇಕಾ ಅಥವಾ ಬೇಡವಾ?

ಅಧ್ಯಕ್ಷರು :— ಶೂನ್ಯ ವೇಳೆಯಲ್ಲಿ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಇರಲೇಬೇಕೆಂದು ಏನೂ ಇಲ್ಲ. ಅವರು ಇದ್ದರೆ ಒಳ್ಳೆಯದು. ಸರ್ಕಾರದವರು ಉತ್ತರ ಕೊಡುತ್ತಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಈ ಸದನ ನಡೆಯುವಾಗ ಅವರು ಎಲ್ಲಿರಬೇಕು? ಅವರು ಈ ಮನೆಯಲ್ಲಿರಬೇಕು, ಇಲ್ಲ ಆ ಮನೆಯಲ್ಲಿರಬೇಕು.

ಶ್ರೀ ವಾಟಾಳ್ ನಾಗರಾಜ್ :— ಶೂನ್ಯ ವೇಳೆಯಲ್ಲಿ ಮಾನ್ಯ ಮಂತ್ರಿಗಳು ಇರಲೇಬೇಕೆಂದು ಏನೂ ಇಲ್ಲ. ಏಕೆಂದರೆ, ಸರ್ಕಾರವೇ ಶೂನ್ಯವಾಗಿದೆ.

SRI M.C. NANAIAH :— Instructions have been given to findout at what stage, the matter is. You please see how fast we are.

MR. SPEAKER :— I am proud of you so much.

(ಅ) ಸಕಲೇಶಪುರ ಪುರಸಭೆಯಲ್ಲಿ ಕುರ್ಚಿ ಮೇಜೆ ತರುವುದರಲ್ಲಿ ಅವ್ಯವಹಾರ.

ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) :— ಮಾನ್ಯ ಅಧ್ಯಕ್ಷರೆ, ಸಕಲೇಶಪುರ ಪುರಸಭೆ ರಿನೋವೇಷನ್ ಬಗ್ಗೆ ಕುರ್ಚಿ ಮೇಜೆ ತರುವುದರಲ್ಲಿ ಅವ್ಯವಹಾರವಾಗಿದೆಯೇ ಎಂದು ನಾನು ಪ್ರಶ್ನೆ ಕೇಳಿದ್ದೆ. ಅದಕ್ಕೆ 1-7-99 ರಲ್ಲಿ ನನಗೆ ಉತ್ತರ ಸಿಕ್ಕಿದೆ. ಒಟ್ಟು ಅಲ್ಲಿ ಐದು ಲಕ್ಷ 94 ಸಾವಿರ ಖರ್ಚಾಗಿದೆ, ಅದರಲ್ಲೂ ಸರ್ಕಾರ ನಾಲ್ಕು ಲಕ್ಷ

ರೂಪಾಯಿಗಳನ್ನು ಕೊಟ್ಟಿದೆ. ಒಂದು ಲಕ್ಷ 94,500 ರೂಪಾಯಿಗಳನ್ನು ಪುರಸಭೆ ಭರ್ತಿ ಮಾಡಿದೆ. ಅಲ್ಲಿ ಅವ್ಯವಹಾರ ನಡೆದಿರತಕ್ಕಂಥ ವಿಚಾರ ನನ್ನ ಗಮನಕ್ಕೆ ಬಂದಿಲ್ಲ ಎನ್ನುವ ಮಾತನ್ನು ಮಾನ್ಯ ಮಂತ್ರಿಯವರು ಹೇಳಿದ್ದಾರೆ. ಎಷ್ಟು ಲಕ್ಷ ರೂಪಾಯಿಗಳ ಅವ್ಯವಹಾರ ನಡೆದಿದೆ ಎನ್ನುವುದನ್ನು ನಾನು ಹೇಳುತ್ತೇನೆ. ಅದನ್ನು ತಾವು ಯಾವ ರೀತಿ ತೆಗೆದುಕೊಳ್ಳುತ್ತೀರಿ ಎಂಬುದು ನನಗೆ ಗೊತ್ತಿಲ್ಲ. ನಾನು ಈ ಬಗ್ಗೆ ಟೆಂಡರ್ ಕರೆಸಿದ್ದೇನೆ, ಒಂದು ಟೆಂಡರ್ ನಾನು ಓಪನ್ ಮಾಡಿದ್ದೇನೆ, ಇನ್ನೂ ಮೂರು ಟೆಂಡರುಗಳು ಹಾಗೆಯೇ ಇದೆ. ತಾವು ಈಗ ಅದನ್ನು ಓಪನ್ ಮಾಡಬೇಕು. ಇವರು ಒಂದು ಕುರ್ಚಿಗೆ 554 ರೂಪಾಯಿಗಳು ಎಂದು ಹೇಳುತ್ತಾರೆ, ಅಂತಹ ನಾಲ್ಕು ಕುರ್ಚಿಗಳು ಆ್ಯಂಗ್ಲರ್ ವಗೈರೆ ಮತ್ತು ಟೈಪ್ ಜೋಡಣೆ ಮಾಡುವುದಕ್ಕೆ ಒಂದು ಜೋಡಣೆಗೆ 2,540 ರೂಪಾಯಿಗಳಾಯಿತು, ಅಂಥದ್ದು 125 ಜೋಡಣೆ ಮಾಡಿದ್ದಾರೆ. ನಾಲ್ಕು ಕುರ್ಚಿಗಳು ಸೇರಿ ಕ್ಯಾಟಲಾಗ್ ಸಮೇತ ಏನು ಇದೆ, ಅದನ್ನು ನಾನು ನಿಮಗೆ ತೋರಿಸುತ್ತೇನೆ. ರೈಲ್ವೆ ಸ್ಟೇಷನ್ ಮತ್ತು ಏರೋಡ್ರಮ್‌ಗಳಲ್ಲಿ ಯಾವ ರೀತಿ ಕುರ್ಚಿಗಳನ್ನು ಸೇರಿಸಿದ್ದಾರೆ ಆ ತರಹ ನಾಲ್ಕು ಕುರ್ಚಿ ಸೇರಿಸುವುದಕ್ಕೆ 2,225 ರೂಪಾಯಿಗಳಾಗುತ್ತದೆ. ಒಂದು ಕುರ್ಚಿಗೆ 544 ರೂಪಾಯಿಗಳು ಎಂದು ಹೇಳಿದರೆ ಅದರ ಲೆಕ್ಕಾಚಾರ ಒಟ್ಟು 5,94,000 ರೂಪಾಯಿಗಳು ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಬರುತ್ತದೆ. ಒಂದಕ್ಕೆ 554 ರೂಪಾಯಿಗಳಂತೆ 500 ಕುರ್ಚಿಗಳಿಗೆ 2.77 ಸಾವಿರ ರೂಪಾಯಿಗಳಾಯಿತು. 2,540 ರೂಪಾಯಿಗಳಂತೆ 125 ಕುರ್ಚಿಗಳಿಗೆ 2.77 ಸಾವಿರರೂಪಾಯಿಗಳಾಯಿತು. 2,540 ರೂಪಾಯಿಗಳಂತೆ 125 ಕುರ್ಚಿಗಳಿಗೆ 3,17,500 ರೂಪಾಯಿಗಳಷ್ಟು ಜೋಡಣೆಗೆ ಖರ್ಚಾಗುತ್ತದೆ. ಇದು ಒಂದು ಟೆಂಡರ್‌ದು ಇದೆ, ಇನ್ನೂ ಮೂರು ಟೆಂಡರ್‌ಗಳನ್ನು ನಾನು ಓಪನ್ ಮಾಡಿಲ್ಲ. ಮಾನ್ಯ ಅಧ್ಯಕ್ಷರೆ, ನೀವೇ ಅದನ್ನು ಓಪನ್ ಮಾಡಿ. ಕುರ್ಚಿ ಜೋಡಣೆ ಮತ್ತು ಎರಡೂ ಸೇರಿ ಒಟ್ಟು 580 ರೂಪಾಯಿಗಳು ಹೀಗೆ ನಾಲ್ಕು ಕುರ್ಚಿ ಜೋಡಣೆಯ ಟೆಂಡರ್‌ನಲ್ಲಿ ಅವರು ಏನು ಬರೆಯುತ್ತಾರೆಂದರೆ, T-4 Model with frames fully moulded top frame-bottom with enamel paints ಅಷ್ಟೂ ಸೇರಿ, ಒಂದು ಕುರ್ಚಿಗೆ ಕೆಎಸ್‌ಟಿ, ಸೇಲ್ಸ್ ಟ್ಯಾಕ್ಸ್ ಸೇರಿ 500 ರೂಪಾಯಿಗಳಾದರೆ, ಇಲ್ಲಿ ಬರೀ ಕುರ್ಚಿಗೆ 555 ರೂಪಾಯಿ ನಾಲ್ಕು ಕುರ್ಚಿಗಳನ್ನು ಜೋಡಣೆ ಮಾಡುವುದಕ್ಕೆ 2,500 ರೂ.ಗಳು ಅದಕ್ಕೆ 2 ಸಾವಿರದಿಂದ ನಾಲ್ಕು ಸಾವಿರ ಬಿಲ್ಲರೆ ಅವರ ಐಟಂನಲ್ಲಿ ಬರುತ್ತದೆ, ಒಂದಕ್ಕೆ 570 ರೂಪಾಯಿಗಳು ಬರುತ್ತದೆ, ಇದು ಅವ್ಯವಹಾರವೆಂದು ತಾವು ಹೇಳುತ್ತೀರಾ? ಅಥವಾ ಇಲ್ಲವಾ? ಎರಡನೆಯದಾಗಿ ಈ ಆಶ್ರಯ ಯೋಜನೆಯಲ್ಲಿ ತಮಗೆ ಗೊತ್ತಿದೆ ಅಂಬೇಡ್ಕರ್ ಮನೆಗಳನ್ನು ಉಚಿತವಾಗಿ ದಲಿತ ಜನರಿಗೆ ಕೊಡುತ್ತಾರೆ. ಶಾಸಕರ ಅನುಮತಿಯ ಮೇಲೆ ಅದು ಹೋಗುತ್ತದೆ. ಆ ಬಗ್ಗೆ ಮೀಟಿಂಗ್ ನಡೆಯುತ್ತದೆ, ನಾವು ಕಮೀಷನ್ ಮಾಡಿ ಪಾಸ್ ಮಾಡುತ್ತೇವೆ. ಅಂಬೇಡ್ಕರ್ ಮನೆಗೆ ಕೊಟ್ಟ ಲಿಸ್ಟ್ ಬದಲಾಯಿಸಿ ಇಷ್ಟೂ ಜನರಿಗೆ ಅಂಬೇಡ್ಕರ್ ಮನೆ ಮಂಜೂರಾಗಿದೆ. ಬಹುಶಃ 40 ಜನರಿಗೆ ಅಂಬೇಡ್ಕರ್ ಮನೆಗಳನ್ನು

ಮಂಜೂರು ಮಾಡಿದ್ದಾರೆ. ಅದರಲ್ಲಿ ನಾಲ್ಕು ಜನರೂ ಸಹ ಸ್ಥಳೀಯ ಫಲಾನುಭವಿಗಳಿಲ್ಲ. ಇಷ್ಟು ಜನ ಅಲ್ಲಿ ಇಲ್ಲವೇ ಇಲ್ಲ. ಅವರು ಯಾರೆಂದು ಗೊತ್ತಿಲ್ಲ. ಇದಕ್ಕೆ ಸಂಬಂಧಪಟ್ಟಹಾಗೆ ಒಬ್ಬ ಚೀಫ್ ಆಫೀಸರ್ ಈ ಕೆಲಸ ಮಾಡಿದರು. ಅವರಿಗೆ ಸಸ್ಪೆಂಡ್ ಮಾಡಿದರು. ಮತ್ತೆ ಆ ಸಸ್ಪೆನ್ಷನ್‌ನ್ನು ರಿವೋಕ್ ಮಾಡಿ ಅವರನ್ನು ಪುತ್ತೂರಿಗೆ ಛಾರ್ಜ್‌ಗೆ ಹಾಕಿದರು. ಸತತವಾಗಿ ಆರು ತಿಂಗಳುಗಳಿಂದ ನಾನು ಮಾನ್ಯ ಮುಖ್ಯಮಂತ್ರಿಗಳ ಕಛೇರಿಯಿಂದ ಹಿಡಿದು ತಂದು ಎಲ್ಲಿಯವರೆಗೆ ಬಂದಿದೆಯೋ ಅಲ್ಲಿಯವರೆಗೆ ನಾನು ಪ್ರಯತ್ನ ಮಾಡುತ್ತಿದ್ದೇನೆ. ಆದರೂ ಸಹ ಒಬ್ಬ ಚೀಫ್ ಆಫೀಸರ್‌ನ್ನು ಅಲ್ಲಿ ಹಾಕಿಕೊಳ್ಳುವುದಕ್ಕೆ ನನ್ನ ಕೈಯಲ್ಲಿ ಆಗಲಿಲ್ಲ. ಅದು ರಿವೋಕ್ ಆಯಿತು. ಅಲ್ಲಿ ಯಾರು ಇಷ್ಟೆಲ್ಲಾ ಅವ್ಯವಹಾರ ಮಾಡಿದ್ದಾರೆ. ಅವರ ಸಸ್ಪೆನ್ಷನ್‌ನನ್ನು ರಿವೋಕ್ ಮಾಡಿ ಮತ್ತೊಂದು ಕಡೆ ಅವರಿಗೆ ಜಾಗ ಕೊಟ್ಟರು. ಮೊದಲು ಕಡೆಗೆ ನನಗೆ ಜ್ಞಾನೇಂದ್ರರವರು ಅವರನ್ನೂ ಕಳುಹಿಸಿದರು, ಅಲ್ಲಿ ಕೂಡ ಅದೇ ರೀತಿಯಾಗಿ ಸಸ್ಪೆನ್ಷನ್‌ನಲ್ಲಿ ಇದು ನಂತರ ಸಕಲೇಶಪುರಕ್ಕೆ ಹಾಕಿದರು, ನಾನು ಬೇಡವೆಂದು ಹೇಳಿದೆ, ಮತ್ತೆ ಈಗ ಶ್ರೀ ಸದಾನಂದಗೌಡರ ಹತ್ತಿರ ಕಳುಹಿಸಿದ್ದಾರೆ. ಸರ್ವೀಸ್ ಉದ್ದಕ್ಕೂ ಕೂಡ ಅವರ ಮೇಲೆ ಛಾರ್ಜಸ್ ಇದೆ. ಯಾವ ರೀತಿ ಅವರ ಸಸ್ಪೆನ್ ಷನ್ ಆರ್ಡರ್ ರಿವೋಕ್ ಆಯಿತು ಎಂದು ನಾನು ಅದನ್ನು ಇಲ್ಲಿ ಹೇಳುವುದಕ್ಕೆ ಬಯಸುವುದಿಲ್ಲ ಆದರೆ ಈ ವಿಷಯವನ್ನು ಅಧ್ಯಕ್ಷರ ಗಮನಕ್ಕೆ ತರುತ್ತಿದ್ದೇನೆ ಇಷ್ಟು ಮೊದಲನೇ ಟೆಂಡರ್ ವಿಷಯವಾಯಿತು; ಉಳಿದ ಮೂರು ಟೆಂಡರ್‌ಗಳನ್ನು ಮಾನ್ಯ ಅಧ್ಯಕ್ಷರಿಗೆ ನಾನು ಕಳುಹಿಸುತ್ತೇನೆ.

(ಟೆಂಡರ್ ಲಕೋಟೆಗಳನ್ನು ಅಧ್ಯಕ್ಷರಿಗೆ ಕಳುಹಿಸಲಾಯಿತು)

ಶ್ರೀ ಎಂ.ಸಿ. ನಾಣಯ್ಯ :— ಮಾನ್ಯ ಶಿವಪ್ಪನವರು ಇಲ್ಲಿ ಈ ಪ್ರಶ್ನೆಯನ್ನು ಏನು ಎತ್ತಿದ್ದಾರೆ, ಈ ಹಿಂದೆ ಕೂಡ ಈ ಪ್ರಶ್ನೆಯನ್ನು ಕೇಳಿ ಸರ್ಕಾರದಿಂದ ಉತ್ತರವನ್ನೂ ಕೂಡ ಪಡೆದುಕೊಂಡಿದ್ದಾರೆ. ಆ ನಾಲ್ಕು ಸೀಲ್ಡ್ ಟೆಂಡರ್‌ನಲ್ಲಿ ಒಂದನ್ನು ನೀವೇ ಓಡೆದಿರಿ, ಇನ್ನು ಮೂರು ನಿಮ್ಮ ಹತ್ತಿರ ಇದೆ ಎಂದು ಹೇಳಿದಿರಿ. ಈ ಸೀಲ್ಡ್ ಟೆಂಡರ್ ಮಾನ್ಯ ಶಿವಪ್ಪನವರ ಕೈಗೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ.

ಶ್ರೀ ಬಿ.ಬಿ. ಶಿವಪ್ಪ :— ಬೆಂಗಳೂರು ಕಂಪನಿಯಿಂದ ಅದನ್ನು ನಾನು ತರಿಸಿಕೊಂಡಿದ್ದೇನೆ. ಸ್ವತಃ ನನ್ನ ಕೈಗೆ ಟೆಂಡರ್ ಬರುವುದಿಲ್ಲ.

ಶ್ರೀ ಎಂ.ಸಿ. ನಾಣಯ್ಯ :— ಮಾನ್ಯ ಅಧ್ಯಕ್ಷರೆ, ಈ ತರಹ ಕುರ್ಚಿಗಳನ್ನು ಮಾಡಿ ಅದನ್ನು ಅಳವಡಿಸಬೇಕಾದರೆ ಎಷ್ಟು ಖರ್ಚು ಆಗಬಹುದು ಎಂಬುದನ್ನು ತಿಳಿದುಕೊಳ್ಳಲು ತಾವೇ ಟೆಂಡರ್ ತರಿಸಿಕೊಂಡಿದ್ದೀರಿ. ಆ ತರಹ ಪೀಠೋಪಕರಣಗಳನ್ನು

ಮಾಡುವುದಕ್ಕೆ ಕೂಡ ಎಷ್ಟು ಖರ್ಚು ಆಗಬಹುದು ಎಂದು ಹೇಳತಕ್ಕಂಥದ್ದನ್ನು ಇದನ್ನೆಲ್ಲಾ ತಮ್ಮ ಮಾಹಿತಿಗೋಸ್ಕರ ಮಾಡಿದ್ದೀರಿ. ಈ ಬಗ್ಗೆ ಹಿಂದೆ ಸರ್ಕಾರದವರು ಒಂದು ಉತ್ತರ ಕೊಟ್ಟಿದ್ದಾರೆ. ಈ ಬಗ್ಗೆ ಖರ್ಚಾಗಿರತಕ್ಕಂಥದ್ದು ಒಟ್ಟು 5.94 ಸಾವಿರ ರೂಪಾಯಿಗಳು ಎಂದು ಕೊಡಲಾಗಿದೆ, ಸರ್ಕಾರದಿಂದ ನಾಲ್ಕು ಲಕ್ಷ ರೂಪಾಯಿಗಳು ಕೊಡಲ್ಪಟ್ಟಿದೆ. ಬಾಕಿ ಇರತಕ್ಕಂಥ ಹಣವನ್ನು ಮುನಿಸಿಪಾಲಿಟಿಯವರು ಖರ್ಚು ಮಾಡಿದ್ದಾರೆಂದು ಹೇಳಿದ್ದಾರೆ. ಇದು ಅವರು ತರಿಸಿಕೊಂಡಂಥದ್ದು ಇದೆ. ಮುನಿಸಿಪಾಲಿಟಿ ತರಿಸಿಕೊಂಡದ್ದು ಅಲ್ಲ.

ಶ್ರೀ ಬಿ.ಬಿ. ಶಿವಪ್ಪ :— ಅದು ನಮ್ಮ ಮುನಿಸಿಪಾಲಿಟಿ ಹೆಸರಿನಲ್ಲಿದೆ. ಕವರ್ ಮೇಲೆ ಅಡ್ರೆಸ್ ಇದೆ ನೋಡಿ. ಈ ರೀತಿಯಲ್ಲಿ 500 ಛೇರ್ಸ್ ಬೇಕು, ಇದಕ್ಕೆ ಟೆಂಡರ್ ಕೊಡಿ, ಮತ್ತು ಇದನ್ನು ಹೇಗೆ ಸಪ್ಲೆ ಮಾಡುತ್ತೀರೆಂದು ಸಹ ಕೇಳಿದ್ದೇನೆ. ಅದಕ್ಕೆ ಅವರು ಟೆಂಡರ್‌ನ್ನು ಮುನಿಸಿಪಾಲಿಟಿಯವರಿಗೆ ಕಳುಹಿಸಿಕೊಟ್ಟಿದ್ದು, ಅದನ್ನು ನಾನು ಓಪನ್ ಮಾಡಿಲ್ಲ. ಶಾಸಕನಾಗಿ ಮಾಡಿದ್ದೇನೆ ಹೊರತು ಶಿವಪ್ಪನಾಗಿ ಮಾಡಲಿಲ್ಲ. ಒಂದು ಸೆಟ್ ಛೇರ್‌ನಲ್ಲಿ ಎರಡೂವರೆಯಿಂದ ಮೂರು ಸಾವಿರದವರೆಗೆ ನಷ್ಟವಾಗಿ ಹೋಗಿದೆ. ಇನ್ನು 125 ಸೆಟ್‌ಗೆ ಎಷ್ಟಾಯಿತು?

ಶ್ರೀ ಎಂ.ಸಿ. ನಾಣಯ್ಯ :— ಇದರಲ್ಲಿ ಕೆಲವು ಅವ್ಯವಹಾರ ನಡೆದಿದೆ. ಅದೇ ತರಹ ಕುರ್ಚಿಗಳನ್ನು ಜೋಡಣೆ ಮಾಡುವುದಕ್ಕೆ ಎಷ್ಟಾಗಬಹುದು ಎಂದು ಅವರು ಕೆಲವು ಮಾಹಿತಿಗಳನ್ನು ಕಳುಹಿಸಿಕೊಟ್ಟಿದ್ದಾರೆ. ಇದರ ಬಗ್ಗೆ ತನಿಖೆ ನಡೆಸುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ. ಅಂಬೇಡ್ಕರ್ ಯೋಜನೆಯಲ್ಲಿ ತಾವೇ ಅಧ್ಯಕ್ಷರಾದ ಸಮಿತಿಯಲ್ಲಿ ಕಳುಹಿಸಿರತಕ್ಕಂತಹ ಪಟ್ಟಿ ಬದಲಾವಣೆಯಾಗಿದೆ ಎಂದು ನೀವು ಹೇಳಿದ್ದೀರಿ, ಇಲ್ಲಿಂದ ಕಳುಹಿಸಿರತಕ್ಕಂತಹ ಪಟ್ಟಿಯಲ್ಲಿ ಅಲ್ಲಿ ಹೋದಾಗ ಆ ಪಟ್ಟಿಯನ್ನು ಬದಲಾವಣೆ ಮಾಡಿದ್ದಾರೆ. ಪಟ್ಟಿಯಲ್ಲಿರುವ ಜನ ಇಲ್ಲವೇ ಇಲ್ಲವೆಂದು ತಾವು ಹೇಳಿದ್ದೀರಿ, ಆ ಪಟ್ಟಿ ಕಳುಹಿಸಿಕೊಡಿ, ಹೆಚ್.ಯು.ಡಿ. ಕಾರ್ಯದರ್ಶಿಯವರಿಗೆ ಹೇಳುತ್ತೇನೆ. ಈ ಎರಡಕ್ಕೆ ಸಂಬಂಧಪಟ್ಟ ಹಾಗೆ ಕೂಡಲೇ ತನಿಖೆ ನಡೆಸಿ ಸರ್ಕಾರಕ್ಕೆ ವರದಿ ಕೊಡುತ್ತೇವೆ.

ಶ್ರೀ ಬಿ.ಬಿ. ಶಿವಪ್ಪ :— ಇಷ್ಟೆಲ್ಲಾ ತನಿಖೆಯಾಗಿ ಅಲ್ಲೇ ಅವರನ್ನು ಸಸ್ಪೆನ್ಷನ್‌ನಲ್ಲಿ ಇಟ್ಟ ಮೇಲೆ ಮತ್ತೆ ಅದು ರಿವೋಕ್ ಆಯಿತು. ಆ ಆಫೀಸ್‌ನಲ್ಲಿ ಲೋಕಾಯುಕ್ತದವರು ಬಂದು ಅವರನ್ನು ಹಿಡಿದು ಹೊರಗೆ ಕಳುಹಿಸಿದರು. ಅದೇ ಸಮಯದಲ್ಲಿ ಸಸ್ಪೆನ್ಷನ್ ರಿವೋಕ್ ಕೂಡ ಆಯಿತು.

ಶ್ರೀ ಎಂ.ಸಿ. ನಾಣಯ್ಯ :— ಲೋಕಾಯುಕ್ತದವರು ಟ್ರಾಪ್ ಮಾಡಿ ಆದ ಮೇಲೆ ಆರು ತಿಂಗಳು ಅವರನ್ನು ಅಮಾನತ್ತಿನಲ್ಲಿಡುತ್ತಾರೆ. ಶೇಕಡ 90 ರಷ್ಟು ಅವರಿಗೆ ಸಂಬಳ ಸಾರಿಗೆ ಕೊಡಬೇಕಾಗುತ್ತದೆ. ಕೆಲಸ ಮಾಡದೆ ಸಂಬಳ ಕೊಡತಕ್ಕಂಥದ್ದು ಸಹ ಉಂಟು.

ಲೋಕಾಯುಕ್ತದವರೇ ಸರ್ಕಾರಕ್ಕೆ ವರದಿ ಕಳುಹಿಸಬೇಕು, ಇಲ್ಲ ಅವರ ಮಟ್ಟದಲ್ಲಿ ಎನ್‌ಕ್ವೈರಿ ಮಾಡಬಹುದು, ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಬಹುದು. ಇದು ಯಾವ ಹಂತದಲ್ಲಿದೆ ಎಂಬ ಬಗ್ಗೆ ವರದಿಯನ್ನು ತರಿಸಿಕೊಂಡು ನಿಮಗೆ ವಿಚಾರವನ್ನು ತಿಳಿಸುತ್ತೇನೆ. ಮತ್ತು ತಾವು ಕೊಟ್ಟಿರತಕ್ಕಂಥ ಟೆಂಡರ್‌ನಲ್ಲಿ ಕುರ್ಚಿಗಳಿಗೆ ಆಗಬಹುದಾದಂಥ ಹಣದ ಬಗ್ಗೆ ಮತ್ತು ಆಶ್ರಯ ಯೋಜನೆಗೆ ತಾವು ಕಳುಹಿಸಿರುವ ಫಲಾನುಭವಿಗಳ ಪಟ್ಟಿಯನ್ನು ಅವರು ಬದಲಾವಣೆ ಮಾಡಿ ಬೇರೆ ಫಲಾನುಭವಿಗಳನ್ನು ಸೇರಿಸಿದ್ದಾರೆ ಎಂದು ಏನು ನೀವು ಹೇಳಿದ್ದೀರಿ ಇದರ ಬಗ್ಗೆಯೂ ಕೂಡ ಹೆಚ್ಚುವರಿ ಕಾರ್ಯದರ್ಶಿಯವರಿಂದ ತನಿಖೆಯನ್ನು ಮಾಡಿಸಿ ವರದಿಯನ್ನು ತರಿಸಿಕೊಂಡು ವಿಷಯ ಪ್ರಸ್ತಾಪ ಮಾಡಿರುವ ಮಾನ್ಯ ಬಿ.ಬಿ. ಶಿವಪ್ಪನವರಿಗೆ ಕಳುಹಿಸಲಾಗುವುದು. ವರದಿ ಬಂದಮೇಲೆ ಈ ಬಗ್ಗೆ ನಾನು ತಿಳಿಸುತ್ತೇನೆ.

ಶ್ರೀ ಬಿ.ಬಿ. ಶಿವಪ್ಪ :— ಮಾನ್ಯ ನಾಣಯ್ಯನವರೆ, ಲೋಕಾಯುಕ್ತ ತನಿಖೆಯಾದ ಮೇಲೆ ಆರು ತಿಂಗಳುಗಳ ಕಾಲ ಸಸ್ಪೆನ್‌ಷನ್ ಆಗುತ್ತದೆ, ಇದು ಮತ್ತೆ ಆರು ತಿಂಗಳಿಗೆ ಮುಂದುವರಿದುಕೊಂಡು ಹೋಗುತ್ತದೆ. ಹೀಗೆ ವರ್ಷಗಟ್ಟಲೆ ವಿಚಾರಣೆಯಾಗುತ್ತಲೇ ಇರುವಾಗ ಈ ಅವಧಿಯಲ್ಲಿ ಸಂಬಳವನ್ನು ಕೊಟ್ಟುಕೊಂಡು ಬಂದಿರುವ ಹಲವಾರು ಕೇಸ್‌ಗಳ ಬಗ್ಗೆ ನಾನು ನಿಮಗೆ ಹೇಳಬಲ್ಲೆ. ಆದರೆ ಒಂದು ವಿಷಯವನ್ನು ನಿಮಗೆ ಹೇಳಬಾರದು ಎಂದುಕೊಂಡಿದ್ದೆ. ಆದರೆ ನೀವು ಈ ಸಂದರ್ಭದಲ್ಲಿ ನೀವು ನನ್ನ ಬಾಯನ್ನು ಬಿಡಿಸುತ್ತಿದ್ದೀರಿ ;ನಾನು ಪ್ರಸ್ತಾಪ ಮಾಡಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಈ ಅಧಿಕಾರಿಯ ಶ್ರೀಮತಿಯವರು ಜನತಾ ದಳದ ಪ್ರಧಾನ ಕಾರ್ಯದರ್ಶಿಯೋ ಅಥವಾ ಇನ್ಯಾವುದೋ ಅಧಿಕಾರವನ್ನು ಹೊಂದಿದ್ದಾರೆ. ಚಿಕ್ಕಮಗಳೂರಿನವರಾದ ಇವರು ಒಂದು ಉನ್ನತ ಹುದ್ದೆಯಲ್ಲಿದ್ದಾರೆ. ಈ ಕಾರಣದಿಂದಲೇ ಲೋಕಾಯುಕ್ತದವರು ಇವರನ್ನು ಹಿಡಿದ ಕೇವಲ 15 ದಿವಸಗಳಲ್ಲಿಯೇ ಇವರ ಸಸ್ಪೆನ್‌ಷನ್ ರಿವೋಕ್ ಆಗಿರುವುದು ಇದೆ. ಇದೇ ಲೋಕಾಯುಕ್ತದವರು ಬೇರೊಬ್ಬ ಸರ್ಕಲ್ ಇನ್ಸ್‌ಪೆಕ್ಟರ್‌ರವರನ್ನು ಸಹ ಹಿಡಿದಿದ್ದಾರೆ. ಈಗಾಗಲೇ 9 ತಿಂಗಳುಗಳಾಗಿವೆ. ನಾನು ಎಲ್ಲರ ಬಳಿಯೂ ಇದರ ಬಗ್ಗೆ ಮಾತನಾಡುತ್ತಿದ್ದೇನೆ. ಆದರೆ ಇದುವರೆಗೂ ಇವರ ಸಸ್ಪೆನ್‌ಷನ್ ರಿವೋಕ್ ಆಗಲಿಲ್ಲ. ನೀವೇನೋ ನಮ್ಮ ಸರ್ಕಾರದಲ್ಲಿ ಕಾನೂನು ಈ ರೀತಿಯಾಗಿದೆ ಎಂದು ಹೇಳಿದಿರಿ.

ಶ್ರೀ ಎಂ.ಸಿ. ನಾಣಯ್ಯ :— ಮಾನ್ಯ ಶಿವಪ್ಪನವರೆ, ಬಿ.ಜೆ.ಪಿ. ಕಾಂಗ್ರೆಸ್, ಜನತಾ ದಳದ ಪಕ್ಷಗಳ ಸಂಬಂಧಿಕರುಗಳೂ ಕೂಡ ಒಂದಲ್ಲ ಒಂದು ಉನ್ನತ ಹುದ್ದೆಯಲ್ಲಿ ಆಡಳಿತದಲ್ಲಿ ಇದ್ದೇ ಇರುತ್ತಾರೆ. ನೀವೇನೋ ಅವರ ಶ್ರೀಮತಿಯವರು ಜನತಾ ದಳದ ಕಾರ್ಯದರ್ಶಿಗಳು ಎಂದು ಹೇಳಿದ್ದೀರಿ. ಅದನ್ನು ನಾವು ಪರಿಗಣಿಸದೆ ಈಗೇನು ವಿಷಯ ಚರ್ಚೆಯಾಗಿದೆ ಅದರ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.